ಕರ್ನಾಟಕ ಸರ್ಕಾರ

ಮೈತ್ರಿ ಯೋಜನೆ

ಸಾಮಾಜಿಕ ಭದ್ರತೆ ಮತ್ತು
ಪಿಂಚಣಿಗಳ
ನಿರ್ದೇಶನಾಲಯ

ಕಂದಾಯ ಇಲಾಖೆ

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಬಡತನ ರೇಖೆಗಿಂತ ಕೆಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ಮಾಸಾಶನ ನೀಡುವ **"ಮೈತ್ರಿ"** ಯೋಜನೆಯನ್ನು ಅನುಷ್ಠಾನಗೊಳಿಸುವ ಬಗ್ಗೆ.

ಓದಲಾಗಿದೆ: 1. 2013–14 ನೇ ಸಾಲಿನ ಅಯವ್ಯಯ ಭಾಷಣದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ರೂ.500 ಗಳ ಮಾಸಾಶನದ ಘೋಷಣೆ.

2. ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ: ಮಮಇ 11 ಮಅನಿ 2013 ದಿನಾಂಕ: 29–07–2013

ಪ್ರಸ್ತಾವನೆ:

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ (ಹಿಜ್ರಾಗಳು, ಕೋಥಿಗಳು, ಜೋಗಪ್ಪಂದಿರು/ಎಫ್‌ಟುಎಂ/ಎಂಟುಎಫ್/ಮಂಗಳಮುಖಿಯರು) ಸಹಾಯ ನೀಡುವ ಉದ್ದೇಶದಿಂದ, ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ ರೂ.500ಗಳ ಮಾಸಾಶನ ನೀಡಲು "ಮೈತ್ರಿ" ಯೋಜನೆಯನ್ನು ಸರ್ಕಾರ 2013–14 ನೇ ಸಾಲಿನ ಅಯವ್ಯಯದಲ್ಲಿ ಘೋಷಿಸಿದೆ. 65ಕ್ಕಿಂತ ಹೆಚ್ಚು ವಯಸ್ಸಾದ ಲಿಂಗತ್ವ ಅಲ್ಪಸಂಖ್ಯಾತರು ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ ಪ್ರಯೋಜನ ಪಡೆಯಬಹುದಾಗಿರುತ್ತದೆ. ಮುಂದುವರೆದು, ಮೇಲೆ ಓದಲಾದ ಉಲ್ಲೇಖ(2) ರನ್ವಯ, ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸುವ ಬಗ್ಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಹೊರಡಿಸಿರುವ ಸುತ್ತೋಲೆಯನ್ನು ಆಧರಿಸಿ ಲಿಂಗತ್ವ ಅಲ್ಪಸಂಖ್ಯಾತರನ್ನು ಗುರುತಿಸಲು ಸರ್ಕಾರ ತೀರ್ಮಾನಿಸಿರುವ ಹಿನ್ನಲೆಯಲ್ಲಿ ಕೆಳಕಂಡ ಆದೇಶ;

ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ 95 ಡಿಎಸ್‌ಪಿ 2013, ಬೆಂಗಳೂರು.
ದಿನಾಂಕ:01/08/2013.

ರಾಜ್ಯದಲ್ಲಿನ ಬಡತನ ರೇಖೆಗಿಂತ ಕೆಳಗಿರುವ 40 ರಿಂದ 64 ವರ್ಷದೊಳಗಿರುವ ಲಿಂಗತ್ವ ಅಲ್ಪಸಂಖ್ಯಾತರಿಗೆ(ಹಿಜ್ರಾಗಳು,ಕೋಥಿಗಳು,ಜೋಗಪ್ಪಂದಿರು,/ಎಫ್‌ಟುಎಂ/ಎಂಟುಎಫ್/ಮಂಗಳಮುಖಿಯರು)- ಆರ್ಥಿಕ ಸಹಾಯವನ್ನು ಒದಗಿಸಿ ಸಮಾಜದ ಮುಖ್ಯವಾಹಿನಿಗೆ ತರುವ ದೃಷ್ಟಿಯಿಂದ ರೂ.500ಗಳ ಮಾಸಾಶನ ನೀಡಲು "ಮೈತ್ರಿ" ಯೋಜನೆಯನ್ನು ದಿನಾಂಕ:01–08–2013ರಿಂದ ಜಾರಿಗೆ ತಂದು ಆದೇಶಿಸಿದೆ.

1. ಉದ್ದೇಶಿತ ಫಲಾನುಭವಿಯ ಆದಾಯ ಗ್ರಾಮೀಣ ಪ್ರದೇಶಗಳಲ್ಲಿ ರೂ.12,000 ಗಳಿಗಿಂತ ಅಥವಾ ನಗರ ಪ್ರದೇಶಗಳಲ್ಲಿ ರೂ.17,000 ಗಳಿಗಿಂತ ಕಡಿಮೆ ಇರತಕ್ಕದ್ದು.
2. ಉದ್ದೇಶಿತ ಫಲಾನುಭವಿಯು ಲಿಂಗತ್ವ ಅಲ್ಪ ಸಂಖ್ಯಾತರೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ:ಮಮಇ 11 ಮಅನಿ 2013, ದಿನಾಂಕ:29–07–2013ರಂತೆ ಗುರುತಿಸತಕ್ಕದ್ದು. ಅದರಂತೆ ಲಿಂಗತ್ವ ಅಲ್ಪಸಂಖ್ಯಾತರುಗಳನ್ನು ಆರೋಗ್ಯ ಕುಟುಂಬ ಮತ್ತು ಕಲ್ಯಾಣ ಇಲಾಖೆಯಿಂದ ಲಿಂಗತ್ವ ದೃಢೀಕರಣ ಪ್ರಮಾಣ ಪತ್ರವನ್ನು ಪಡೆಯಲು ಇವರುಗಳು ಎದುರಿಸಬಹುದಾದ ತೊಂದರೆಗಳನ್ನು ನಿವಾರಿಸಲು, ಲಿಂಗತ್ವ ಅಲ್ಪ ಸಂಖ್ಯಾತರುಗಳು "ನಿರ್ವಾಣ್" ಆಗಿದ್ದಲ್ಲಿ ಮಾತ್ರ ಲಿಂಗತ್ವವನ್ನು ಗುರುತಿಸಲು ಸಾಧ್ಯವೆಂದು ಹಾಗೂ ವೈದ್ಯರು ಸಹ ಪ್ರಮಾಣ ಪತ್ರ ನೀಡಲು ಸಹಕಾರಿಯಾಗುತ್ತದೆ. ಆದರೆ, "ನಿರ್ವಾಣ್" ಆಗದವರಿಗೆ ವೈದ್ಯಕೀಯ ಪ್ರಮಾಣ ಪತ್ರ ನೀಡಲು ಸಾಧ್ಯವಾಗುತ್ತಿಲ್ಲವೆಂಬುದನ್ನು ಸರ್ಕಾರವು ಮನಗಂಡು, ಲಿಂಗತ್ವ ಅಲ್ಪಸಂಖ್ಯಾತರಲ್ಲರಿಗೂ

ಸಿ-1

ಸಮಾನ ದೃಷ್ಟಿಯಿಂದ ಸರ್ಕಾರದ ಸವಲತ್ತು ದಕ್ಕಿಸುವಂತಾಗಲು ಸಮುದಾಯ ಆಧಾರಿತ ಸಂಸ್ಥೆಗಳಾದ "ಸಂಗಮ" ಮತ್ತು "ಕೆ.ಎಸ್.ಎಂ.ಎಫ್" ಸಂಸ್ಥೆಗಳು ನೋಂದಾಯಿತ ಸದಸ್ಯತ್ವವನ್ನು ಅಫಿಡವಿಟ್ ಮೂಲಕ ಪ್ರಮಾಣೀಕರಿಸಿ ಗುರುತಿಸಕೊಳ್ಳತಕ್ಕದ್ದು.

3. ಇತರೇ ಯವುದೇ ಸಾಮಾಜಿಕ ಭದ್ರತಾ ಯೋಜನೆಗಳಡಿ ಅಥವಾ ಯಾವುದೇ ತರಹದ ಪಿಂಚಣಿ ಇತ್ಯಾದಿಗಳನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿರಬಾರದು.
4. ಈ ಮಾಸಾಶನವನ್ನು ಅಯಾ ಹೋಬಳಿಯ ಉಪ ತಹಸೀಲ್ದಾರರು/ತಾಲ್ಲೂಕಿನ ತಹಸೀಲ್ದಾರರು ಅರ್ಹ ಫಲಾನುಭವಿಗಳಿಗೆ ಮಂಜೂರು ಮಾಡುವುದು.
5. ಈ ಮಾಸಾಶನವನ್ನು ಫಲಾನುಭವಿಯ ಬ್ಯಾಂಕ್ ಖಾತೆಗೆ ಅಥವಾ ಅಂಚೆ ಕಚೇರಿಯ ಖಾತೆಗೆ ಖಜಾನೆಯಿಂದ ಪ್ರತಿ ತಿಂಗಳು ವರ್ಗಾಯಿಸಲಾಗುವುದು.
6. ಈ ಯೋಜನೆಗೆ ತಗಲುವ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2235-02-101-0-20" ಅಂಗವಿಕಲ ವೇತನದಡಿ ಒದಗಿಸಲಾದ ಅನುದಾನದಲ್ಲಿ ಭರಿಸತಕ್ಕದ್ದು.
7. ಈ ಯೋಜನೆಯ ಇತರೆ ಸಂಪೂರ್ಣ ರೂಪುರೇಶೆಗಳು ನಿಗದಿತ ಅರ್ಜಿ ನಮೂನೆ ಹಾಗೂ ಮಂಜೂರಾತಿ ನೀಡುವ ವಿಧಿವಿಧಾನಗಳನ್ನು ಇದಕ್ಕೆ ಲಗತ್ತಿಸಿದ ಅನುಬಂಧದಲ್ಲಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

(ಲತಾ ಜಿ ಕೃಷ್ಣರಾವ್)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಕಂದಾಯ ಇಲಾಖೆ

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು; ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ)(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯ ಮಂತ್ರಿಗಳವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ವಿಭಾಗೀಯ ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಪಿ&ಜಿಎಸ್ ಯುನಿಟ್, 4ನೇ ಮಹಡಿ, ಜೆ.ಸಿ. ರೋಡ್, ಬೆಂಗಳೂರು-02.
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾವಿ/ಮೈಸೂರು/ಗುಲ್ಬರ್ಗಾ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ಸಂಬಂಧಪಟ್ಟ ಉಪ ವಿಭಾಗಧಿಕಾರಿಗಳು/ತಹಸೀಲ್ದಾರರುಗಳಿಗೆ.
11. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
12. ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.

ಸರ್ಕಾರಿ ಆದೇಶ ಸಂಖ್ಯೆ: ಕಂಇ 95 ಡಿಎಸ್‌ಪಿ 2013, ದಿನಾಂಕ: 01-08-2013ಕ್ಕೆ ಅನುಬಂಧ

ಮೈತ್ರಿ ಯೋಜನೆ

1. ಈ ನಿಯಮಗಳನ್ನು ಕರ್ನಾಟಕ "ಮೈತ್ರಿ" ಯೋಜನೆ ನಿಯಮಗಳು ಎಂದು ಕರೆಯತಕ್ಕದ್ದು.
2. ಅವು ಕರ್ನಾಟಕ ರಾಜ್ಯಾದ್ಯಂತ ಅನ್ವಯವಾಗತಕ್ಕದ್ದು.
3. ಈ ನಿಯಮಗಳು 1ನೇ ಆಗಸ್ಟ್ 2013ರಿಂದ ಜಾರಿಗೆ ಬರತಕ್ಕದ್ದು.
4. ನಿಯಮ 6ರಲ್ಲಿ ವಿವರಿಸಿರುವ ಎಲ್ಲಾ ವ್ಯಕ್ತಿಗಳಿಗೆ ಇವು ಅನ್ವಯವಾಗುತ್ತವೆ.
5. (1) ಈ ಯೋಜನೆಯಡಿಯಲ್ಲಿ ಮಾಸಿಕ ರೂ.500/-ಗಳ ಮಾಸಾಶನ ಪಡೆಯಲು ಈ ಕೆಳಕಂಡ ಷರತ್ತುಗಳನ್ನು ಪೂರೈಸುವ ಯಾವುದೇ ವ್ಯಕ್ತಿಯು ಅರ್ಹಳಾಗಿರುತ್ತಾರೆ.

   (i) ವ್ಯಕ್ತಿಯು 40 ರಿಂದ 65 ವರ್ಷ ವಯಸ್ಸಿನೊಳಗಿರಬೇಕು.

   (ii) ಉದ್ದೇಶಿತ ಫಲಾನುಭವಿಯ **ವಾರ್ಷಿಕ ಆದಾಯವು** ಸ್ಥಳೀಯ ಕಂದಾಯ ಪ್ರಾಧಿಕಾರಿಯು ಪ್ರಮಾಣೀಕರಿಸಿರುವಂತೆ ಗ್ರಾಮೀಣ ಪ್ರದೇಶದಲ್ಲಿ ರೂ.12,000 ಹಾಗೂ ನಗರ ಪ್ರದೇಶದಲ್ಲಿ ರೂ.17,000/-ಗಳಿಗಿಂತ ಹೆಚ್ಚಾಗಿರಬಾರದು

   (iii) ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನ, ನಿರ್ಗತಿಕ ವಿಧವಾ ವೇತನ, ಸಂಧ್ಯಾ ಸುರಕ್ಷಾ ಯೋಜನೆ, ದೇವದಾಸಿ ವೇತನ ಅಥವಾ ಅಂಗವಿಕಲರ ವೇತನ ಅಥವಾ ಯಾವುದೇ ಇತರ ರೀತಿಯ ಮಾಸಾಶನವನ್ನು ಸಾರ್ವಜನಿಕ ಅಥವಾ ಖಾಸಗೆ ಮೂಲಗಳಿಂದ ಪಡೆಯುತ್ತಿರುವ ವ್ಯಕ್ತಿಗಳು ಈ ಯೋಜನೆಯಡಿಯಲ್ಲಿ ಮಾಸಾಶನ ಪಡೆಯಲು ಅರ್ಹರಾಗಿರುವುದಿಲ್ಲ.

6. ವ್ಯಕ್ತಿಯು ರಾಜ್ಯದ ಯಾವುದೇ ಭಾಗದಲ್ಲಿ ವಾಸವಾಗಿದ್ದರೂ ಮಾಸಾಶನವು ಪ್ರತಿ ತಿಂಗಳಿಗೆ ರೂ.500/-ಗಳು ಇರುತ್ತದೆ.
7. ಈ ನಿಯಮಗಳಡಿಯಲ್ಲಿ ಮಾಸಾಶನವು ಅವರು ಮರಣ ಹೊಂದುವತನಕ ಅಥವಾ ಅವರು ಮಾಸಾಶನ ಹೊಂದಲು ಅರ್ಹತೆಯನ್ನು ಕಳೆದುಕೊಳ್ಳುವ ಸಂದರ್ಭದಲ್ಲಿ ಮುಕ್ತಾಯಗೊಳಿಸುವ ತನಕ ಪಾವತಿಸಲಾಗುವುದು.
8. ವ್ಯಕ್ತಿಯು ಖಾಯಂ ರೀತಿ ವಾಸಿಸುತ್ತಿರುವ ಸ್ಥಳದ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ನಾಡ ಕಚೇರಿಯ ಉಪತಹಶೀಲ್ದಾರರು ಮಾಸಾಶನವನ್ನು ಮಂಜೂರು ಮಾಡಲು ಅರ್ಹ ಅಧಿಕಾರಿಯಾಗಿರುತ್ತಾರೆ.
9. ಉದ್ದೇಶಿತ ಫಲಾನುಭವಿಯು ಸಾಮಾಜಿಕ ಭದ್ರತಾ ಯೋಜನೆಗಳಡಿ ಸವಲತ್ತು ಪಡೆಯಲು ಇಚ್ಚಿಸಿರುತ್ತಾರೋ ನಿಗದಿಪಡಿಸಿರುವ ನಮೂನೆಯಲ್ಲಿ ಸಂಬಂಧಪಟ್ಟ ದಾಸ್ತಾವೇಜುಗಳೊಂದಿಗೆ, ಅರ್ಜಿಯನ್ನು ತಮ್ಮ ವಾಸಸ್ಥಳದ ವ್ಯಾಪ್ತಿಯಲ್ಲಿ ಬರುವ "ಅಟಲ್‌ಜೀ ಜನಸ್ನೇಹಿ ಕೇಂದ್ರ" ಗಳಲ್ಲಿ ಖುದ್ದು ನೀಡಬೇಕಿರುತ್ತದೆ. ಅಂಚೆ ಮೂಲಕ ಅಥವಾ ಅರ್ಜಿದಾರರಲ್ಲದ ವ್ಯಕ್ತಿಯು ನೀಡಿದ ಅರ್ಜಿಗಳನ್ನು ಮತ್ತು ಒಂದೇ ವ್ಯಕ್ತಿಯಿಂದ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸ್ವೀಕರಿಸತಕ್ಕದ್ದಲ್ಲ.
10. ಅರ್ಜಿದಾರರು ಕೆಳಕಂಡ ದಾಖಲೆಗಳನ್ನು ಅಗತ್ಯವಾಗಿ ನೀಡಬೇಕಾಗಿರುತ್ತದೆ.

    i) ಅಂತ್ಯೋದಯ ಪಡಿತರ ಚೀಟಿ ಇಲ್ಲದಿದ್ದಲ್ಲಿ ಸ್ವಯಂಘೋಷಿತ ಆದಾಯ ಪ್ರಮಾಣ ಪತ್ರ

    ii) ಚುನಾವಣಾ ಗುರುತಿನ ಚೀಟಿ ಅಥವಾ ವಿಳಾಸದ ಬಗ್ಗೆ ಧೃಡೀಕರಣ ದಾಖಲೆ/ವಯಸ್ಸಿನ ಬಗ್ಗೆ ವೈದ್ಯಕೀಯ ದೃಡೀಕರಣ ಪತ್ರ.

    iii) ಲಿಂಗತ್ವ ಅಲ್ಪಸಂಖ್ಯಾತರೆಂದು ವೈದ್ಯಕೀಯ ದೃಡೀಕರಣ ಪತ್ರ ಅಥವಾ ಲಿಂಗತ್ವ ಅಲ್ಪ ಸಂಖ್ಯಾತರೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ:ಮಮಇ 11 ಮಅನಿ 2013, ದಿನಾಂಕ:29-07-2013ರಂತೆ ಸಮುದಾಯ ಆಧಾರಿತ ಸಂಸ್ಥೆಗಳಾದ "ಸಂಗಮ" ಮತ್ತು "ಕೆ.ಎಸ್.ಎಂ.ಎಫ್" ಸಂಸ್ಥೆಗಳ ನೋಂದಾಯಿತ ಸದಸ್ಯತ್ವವನ್ನು ಅಫಿಡವಿಟ್/ ಪ್ರಮಾಣ ಪತ್ರ.

    iv) ಅರ್ಜಿದಾರರು ಈಗಾಗಲೇ ಬ್ಯಾಂಕ್ ಖಾತೆ ಅಥವಾ ಅಂಚೆ ಉಳಿತಾಯ ಖಾತೆ ಹೊಂದಿದ್ದ ಪಕ್ಷದಲ್ಲಿ, ಬ್ಯಾಂಕ್ ಶಾಖೆಯ/ಅಂಚೆ ಕಚೇರಿ ಹೆಸರು, ವಿಳಾಸ ಮತ್ತು ಖಾತೆಯ ಸಂಖ್ಯೆಯನ್ನು ಅರ್ಜಿದಾರರಿಂದ ಪಡೆಯತಕ್ಕದ್ದು.

    v) ಅರ್ಜಿಗಳನ್ನು ಸ್ವೀಕರಿಸಿದ ತಕ್ಷಣವೇ ಸ್ವೀಕೃತಿ ಸಂಖ್ಯೆಯನ್ನೊಳಗೊಂಡ ಸ್ವೀಕೃತಿ ಪತ್ರವನ್ನು ನೀಡತಕ್ಕದ್ದು. ಈ ಸ್ವೀಕೃತಿ ಸಂಖ್ಯೆಯನ್ನು ಅರ್ಜಿದಾರರು ಅರ್ಜಿ ವಿಲೇವಾರಿಯಾಗುವವರೆಗೆ ಹಾಜರುಪಡಿಸತಕ್ಕದ್ದು.

vi) ಅರ್ಜಿದಾರರು ನೀಡಿರುವ ಎಲ್ಲಾ ಮಾಹಿತಿಯನ್ನು ನಾಡಕಛೇರಿಯ/ಅಟಲ್‌ಜೀ ಜನಸ್ನೇಹಿ ಕೇಂದ್ರಗಳ ತಂತ್ರಾಂಶದಲ್ಲಿ ಮಾಹಿತಿಯನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ಕಡ್ಡಾಯವಾಗಿ ತುಂಬತಕ್ಕದ್ದು ಹಾಗೂ ಎಲ್ಲಾ ದಾಸ್ತಾವೇಜುಗಳನ್ನು ಸ್ಕ್ಯಾನ್ ಮಾಡಿ ತಂತ್ರಾಂಶದಲ್ಲಿ ತುಂಬತಕ್ಕದ್ದು. ಅರ್ಜಿದಾರರು ಯೋಜನೆಯಡಿ ನಿಗದಿಪಡಿಸಿರುವ ದಾಸ್ತಾವೇಜನ್ನು ನೀಡಿರುವ ಬಗ್ಗೆ ತಂತ್ರಾಂಶದಲ್ಲಿ ದೃಢಪಡಿಸತಕ್ಕದ್ದು.

11. **ಅರ್ಜಿಗಳನ್ನು ಸಂಸ್ಕರಿಸುವ ವಿಧಾನ:**

i) ಸ್ವೀಕರಿಸಿದ ಅರ್ಜಿಗಳನ್ನು ನಾಡಕಛೇರಿಯ/ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಗ್ರಾಮಲೆಕ್ಕಾಧಿಕಾರಿಗಳು ಕೂಡಲೇ ಯೋಜನೆಗಳಡಿ ನಿರ್ವಹಿಸುತ್ತಿರುವ ಅರ್ಜಿ ಸ್ವೀಕೃತಿ ರಿಜಿಸ್ಟರ್ (ನಮೂನೆ- II)ನಲ್ಲಿ ಅರ್ಜಿದಾರರ ಹೆಸರು, ತಂದೆಯ ಹೆಸರು, ವಿಳಾಸ ದಾಖಲಿಸತಕ್ಕದ್ದು. ನಂತರ ಅರ್ಜಿಯನ್ನು ದಸ್ತಾವೇಜುಗಳೊಂದಿಗೆ, ಸಂಬಂಧಪಟ್ಟ ರಾಜಸ್ವ ನಿರೀಕ್ಷಕರಿಗೆ ಸೂಕ್ತ ರಿಜಿಸ್ಟರ್‌ನಲ್ಲಿ ನಮೂದಿಸಿ ನೀಡತಕ್ಕದ್ದು.

ii) ರಿಜಿಸ್ಟರ್‌ನ್ನು ಕನಿಷ್ಠ ಪಕ್ಷ 30 ವರ್ಷಗಳವರೆಗೂ ಕಾಯ್ದಿರಿಸತಕ್ಕದ್ದು.

iii) ರಾಜಸ್ವ ನಿರೀಕ್ಷಕರು ಅರ್ಜಿಗಳನ್ನು ಪಡೆದಿರುವ ಬಗ್ಗೆ ಸೂಕ್ತ ದಾಖಲಾತಿಗಳನ್ನು ನಿರ್ವಹಿಸತಕ್ಕದ್ದು, ಅದರಲ್ಲಿ ಅರ್ಜಿಗಳನ್ನು ನಾಡಕಛೇರಿ/ಅಟಲ್‌ಜೀ ಜನಸ್ನೇಹಿ ಕೇಂದ್ರಗಳಿಂದ ಪರಿಶೀಲನೆಗಾಗಿ ಪಡೆದ ದಿನಾಂಕವನ್ನು ಕಡ್ಡಾಯವಾಗಿ ದಾಖಲಿಸತಕ್ಕದ್ದು.

iv) ರಾಜಸ್ವ ನೀರಿಕ್ಷಕರು ಅರ್ಜಿಯೊಂದಿಗೆ ಯೋಜನೆಯಡಿ ನಿಗದಿಪಡಿಸಿರುವ ದಾಸ್ತವೇಜುಗಳನ್ನು ತಕ್ಷಣವೇ ಪರಿಶೀಲಿಸಿ ಅರ್ಜಿದಾರರು ಈಗಾಗಲೇ ಯಾವುದಾದರೂ ಸಾಮಾಜಿಕ ಭದ್ರತಾ ಯೋಜನೆಯಡಿ ಸವಲತ್ತು ಪಡೆದಿರುವ ಪಕ್ಷದಲ್ಲಿ ಸೂಕ್ತ ಹಿಂಬರಹವನ್ನು ಅರ್ಜಿದಾರರಿಗೆ ನೀಡಲು ಉಪತಹಸೀಲ್ದಾರರಿಗೆ ಶಿಫಾರಸ್ಸು ಮಾಡತಕ್ಕದ್ದು.

12. **ಮಂಜೂರಾತಿ ನೀಡುವ ವಿಧಾನ:**

i. ಅರ್ಜಿದಾರರು ಈಗಾಗಲೇ ಯಾವುದೇ ಪಿಂಚಣಿಯನ್ನು ಪಡೆಯುತ್ತಿಲ್ಲದ್ದ ಪಕ್ಷದಲ್ಲಿ ಕೆಳಕಂಡ ವಿಧಿವಿಧಾನಗಳನ್ನು ಅನುಸರಿಸಿ ಅರ್ಜಿದಾರರು ಅರ್ಜಿ ಸಲ್ಲಿಸಿರುವ ವೇತನಕ್ಕೆ ಅರ್ಹರೇ ಎಂದು ಪರಿಶೀಲಿಸತಕ್ಕದ್ದು.

i) ಅರ್ಜಿಯಲ್ಲಿ ನಮೂದಿಸಿರುವ ವಿಳಾಸದಲ್ಲಿ ಅರ್ಜಿದಾರರು ವಾಸವಾಗಿರುವ ಬಗ್ಗೆ ಖುದ್ದು ಸ್ಥಳ ಪರಿವೀಕ್ಷಣೆ ಮಾಡಿ ಖಾತ್ರಿ ಪಡಿಸಿಕೊಳ್ಳಬೇಕು.

ii) ವಿಚಾರಣಾಧಿಕಾರಿಯು ಅರ್ಜಿದಾರರಿಗೆ ಮಾಸಾಶನ ಮಂಜೂರು ಮಾಡುವ ಬಗ್ಗೆ ಅಥವಾ ಹಿಂಬರಹ ನೀಡುವ ಬಗ್ಗೆ ತನ್ನ ಸ್ಪಷ್ಟ ಶಿಫಾರಸ್ಸಿನೊಂದಿಗೆ ಸಂಬಂಧಪಟ್ಟ ಉಪ ತಹಸೀಲ್ದಾರರಿಗೆ ವರದಿ ಸಲ್ಲಿಸತಕ್ಕದು.

iii) ವಿಚಾರಣಾಧಿಕಾರಿಯು ತನ್ನ ವರದಿಯನ್ನು ಜರೂರಾಗಿ ಅರ್ಜಿದಾರರ ಗಮನಕ್ಕೆ ತಂದು ಆಕೆಯ ಸಹಿ ಅಥವಾ ಹೆಬ್ಬರಳ ಗುರುತನ್ನು ಪಡೆಯತಕ್ಕದ್ದು.

13. ಪರಿಶೀಲನೆಯನ್ನು ನಡೆಸಿದ ನಂತರ ವಿಚಾರಾಣಾಧಿಕಾರಿಯು III ನೇ ನಮೂನೆಯಲ್ಲಿ ಒಂದು ವರದಿಯನ್ನು ಭರ್ತಿ ಮಾಡಿ ಅದನ್ನು ಅರ್ಜಿಯೊಂದಿಗೆ ಉಪತಹಶೀಲ್ದಾರರಿಗೆ ಒಪ್ಪಿಸಬೇಕು. ಅರ್ಜಿಯ ಇನ್ನೊಂದು ಪ್ರತಿಯನ್ನು ತನ್ನ ಬಳಿ ಇರಿಸಿಕೊಳ್ಳಬೇಕು. ಉಪತಹಶೀಲ್ದಾರರು ಅರ್ಜಿದಾರರ ಸ್ಥಿತಿಗತಿಯ ಬಗ್ಗೆ ಮನವರಿಕೆಯಾದ ತರುವಾಯ ಮಂಜೂರಾತಿ ನಮೂನೆ- IVರಲ್ಲಿ ಆದೇಶವನ್ನು ಹೊರಡಿಸುತ್ತಾರೆ. ಮಾಸಾಶನವನ್ನು ಮಂಜೂರು ಮಾಡುವ ಆದೇಶವನ್ನು ಪ್ರತಿ ತಿಂಗಳು 10ನೇ ದಿನಾಂಕದಂದು ಅದಕ್ಕೂ ಮುಂಚಿತವಾಗಿ ಸಂಚಿತ ನಮೂನೆಯಲ್ಲಿ ಮಹಾಲೇಖಪಾಲರು ಹಾಗೂ ಕಂದಾಯ ಸಚಿವಾಲಯ, ನಿರ್ದೇಶಕರು, ಸಾಮಾಜಿಕ ಭದ್ರತೆ ಮತ್ತು ವೇತನಗಳ ನಿರ್ದೇಶನಾಲಯ, ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು ಮತ್ತು ಮಂಜೂರಾತಿ ನೀಡಿದಾಗಲೆಲ್ಲಾ ತಾಲ್ಲೂಕಿನ ತಹಸೀಲ್ದಾರರಿಗೆ ತಿಳಿಸತಕ್ಕದ್ದು.

14. **ತಾಲ್ಲೂಕು ಮಟ್ಟದಲ್ಲಿ ಆದೇಶಗಳನ್ನು ಕ್ರೋಡೀಕರಿಸುವ ವಿಧಾನ:**

i. ಎಲ್ಲಾ ನಾಡಕಛೇರಿ/ಅಟಲ್‌ಜೀ ಜನಸ್ನೇಹಿ ಕೇಂದ್ರಗಳಲ್ಲಿ ಮಂಜೂರಾದ ಪ್ರತಿಯೊಂದು ಪ್ರಕರಣಗಳನ್ನು ಫಲಾನುಭವಿಗಳ ನಿರ್ವಹಣಾ ತಂತ್ರಾಂಶದಲ್ಲಿ ಸೆಳೆದು (Beneficiary Monitoring System) ಈಗಾಗಲೇ ಅರ್ಜಿದಾರರು ಸಾಮಾಜಿಕ ಭದ್ರತಾ ಯೋಜನೆಯಡಿ ಸವಲತ್ತು ಪಡೆಯುತ್ತಿಲ್ಲವೆಂದು ಧೃಡಪಡಿಸಿಕೊಂಡು, ನಮೂನೆ-V ರಲ್ಲಿ ದಾಖಲಾತಿ ವಹಿಯನ್ನು ತಾಲ್ಲೂಕು ಕಚೇರಿಯಲ್ಲಿ ನಿರ್ವಹಿಸತಕ್ಕದ್ದು ಹಾಗೂ ಸಂಬಂಧ ಪಟ್ಟ ಖಜಾನಾಧಿಕಾರಿಗಳಿಗೆ

ವೇತನದಾರರಿಗೆ ಪಿಂಚಣಿ ಹಣ ಪಾವತಿಸಲು ಮಂಜೂರಾತಿ ಆದೇಶಗಳನ್ನು ಘೋಷ್ವಾರೆಯೊಂದಿಗೆ ಕಳುಹಿಸತಕ್ಕದ್ದು.

ii. ಜಿಲ್ಲಾ/ಉಪ ಖಜಾನಾಧಿಕಾರಿಗಳು ಪ್ರತಿ ತಿಂಗಳು 20ನೇ ತಾರೀಕಿನೊಳಗೆ ಹಿಂದಿನ ತಿಂಗಳು ಸಂಬಂಧಪಟ್ಟ ತಾಲ್ಲೂಕು ಕಚೇರಿಯಿಂದ ಬಂದಿರುವ ವೇತನದಾರರ ಪಟ್ಟಿಯನ್ನು ಅಂಗೀಕರಿಸಿ, ಪ್ರತ್ಯೇಕವಾಗಿ ಸ್ವೀಕರಿಸಲಾದ ಆದೇಶದ ಪ್ರತಿಯ ಜೊತೆಗೆ ಪರಿಶೀಲಿಸತಕ್ಕದ್ದು. ಪ್ರತ್ಯೇಕ ಆದೇಶಗಳನ್ನು ಸ್ವೀಕರಿಸಿ ಅದನ್ನು ಸಂಚಿತ ಪಟ್ಟಿಯಲ್ಲಿ ಸೇರಿಸಲಾದ ಪ್ರಕರಣಗಳನ್ನು ಮಾತ್ರ ಖಜಾನೆ ದತ್ತಾಂಶದಲ್ಲಿ ಸೇರಿಸತಕ್ಕದ್ದು. ಇದರಲ್ಲಿ ವ್ಯತ್ಯಾಸಗಳಿದ್ದಲ್ಲಿ ಅದನ್ನು ತಹಸೀಲ್ದಾರರಿಗೆ ತಿಳಿಸತಕ್ಕದ್ದು. ತಂತ್ರಾಂಶದಲ್ಲಿ ಪಿಂಚಣಿ ವಿತರಣೆಗಾಗಿ ತುಂಬಲು ಸೂಕ್ತ ಕ್ರಮ ಕೈಗೊಂಡಿರುವ ಬಗ್ಗೆ ವರದಿಯನ್ನು ತಾಲ್ಲೂಕು ತಹಸೀಲ್ದಾರರಿಗೆ ಕಳುಹಿಸತಕ್ಕದ್ದು.

15. ಮೈತ್ರಿ ಯೋಜನೆಯಡಿಯಲ್ಲಿ ವೇತನದ ಅರ್ಜಿಗಳನ್ನು ನಾಡಕಚೇರಿ/ಅಟಲ್‌ಜಿ ಜನಸ್ನೇಹಿ ಕೇಂದ್ರಗಳಲ್ಲಿ ಸ್ವೀಕರಿಸಿದ ದಿನಾಂಕದಿಂದ ಗರಿಷ್ಠ 30 ದಿನಗಳೊಳಗಾಗಿ ಅವುಗಳನ್ನು ವಿಲೇವಾರಿ ಮಾಡತಕ್ಕದ್ದು.

16. ಪ್ರತಿಯೊಂದು ಗ್ರಾಮದ ಗ್ರಾಮಲೆಕ್ಕಾಧಿಕಾರಿಯು V ನೇ ನಮೂನೆಯಲ್ಲಿ ಆಯಾಯ ಗ್ರಾಮದಲ್ಲಿ ವೇತನ ಪಡೆಯುವವರು ಫಲಾನುಭವಿಗಳ ಬಗ್ಗೆ ಒಂದು ರಿಜಿಸ್ಟರನ್ನು ಇಟ್ಟಿರತಕ್ಕದ್ದು. ವೇತನದಾರರ ಮರಣದ ಅಥವಾ ಅವರ ವಿಳಾಸ ಬದಲಾವಣೆ ಬಗ್ಗೆ ತಹಶೀಲ್ದಾರರಿಗೆ, ಜಿಲ್ಲಾ ಖಜಾನಾಧಿಕಾರಿಗಳಿಗೆ ಹಾಗೂ ಉಪ ಖಜಾನಧಿಕಾರಿಗಳಿಗೆ VI ನೇ ನಮೂನೆಯಲ್ಲಿ ತಿಳಿಸುವುದು ಆತನ ಕರ್ತವ್ಯವಾಗಿದೆ.

17. (i) ಪ್ರತಿಯೊಬ್ಬ ತಹಶೀಲ್ದಾರರು/ಉಪ ತಹಶೀಲ್ದಾರರು ತಮ್ಮ ಪ್ರದೇಶದ ವ್ಯಾಪ್ತಿಗೊಳಪಟ್ಟಿರುವ ವೇತನದಾರರು ಜೀವಂತವಾಗಿದ್ದಾರೆಯೇ ಹಾಗೂ ನಿಯಮ-6ರನ್ವಯ ಅರ್ಹತೆಯನ್ನು ಹೊಂದಿದ್ದಾರೆಯೇ ಎಂಬ ಬಗ್ಗೆ ವಾರ್ಷಿಕ ಪರಿಶೀಲನಾ ಕಾರ್ಯವನ್ನು ಕೈಗೊಳ್ಳಬೇಕು. ಅಂತಹ ಪರಿಶೀಲನಾ ಕಾರ್ಯದ ಫಲಿತಾಂಶಗಳನ್ನು ತಿಳಿಸುವಂತ ವರದಿಯನ್ನು ಉಪ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾ ಖಜಾನಾಧಿಕಾರಿಗಳು/ಉಪ ಖಜಾನಾಧಿಕಾರಿಗಳಿಗೆ ಕಳುಹಿಸಬೇಕು. ಈಗ ಜೀವಂತವಿಲ್ಲದ ಹಾಗೂ ವೇತನ ಪಡೆಯಲು ಅರ್ಹತೆ ಕೊನೆಗೊಂಡಿರುವ ವೇತನದಾರರ ಹೆಸರುಗಳು ಹಾಗೂ ವೇತನದ ಸಂಖ್ಯೆಗಳನ್ನು ಸಹ ಆ ವರದಿ ಒಳಗೊಂಡಿರತಕ್ಕದ್ದು. ತಹಶೀಲ್ದಾರರು ಹೊರಡಿಸಿದಂತ ರದ್ದಿಯಾಯ್ತಿ ಆದೇಶಗಳನ್ನು ಸ್ವೀಕರಿಸಿದ ತರುವಾಯ ವಿತರಣೆ ಅಧಿಕಾರಿಯು ಅಂತಹ ವ್ಯಕ್ತಿಗಳಿಗೆ ಮುಂದಿನ ಹಣ ಸಂದಾಯ ಮಾಡುವುದನ್ನು ನಿಲ್ಲಿಸತಕ್ಕದ್ದು.

18. ವೇತನ ಫಲಾನುಭವಿಗಳ ಮರಣದ ಸಂದರ್ಭದಲ್ಲಿ ಅವರ ಮರಣ ಸಂಭವಿಸಿದ ದಿನಾಂಕದವರೆಗೆ ತೆಗೆದುಕೊಳ್ಳದೇ ಇರುವ ವೇತನವು ರದ್ದಾಗುತ್ತದೆ.

19. ವೇತನದಾರರ ವಿಳಾಸ ಬದಲಾಣೆಯಾದಲ್ಲಿ ಅದನ್ನು ತಹಶೀಲ್ದಾರರಿಗೆ ತಿಳಿಸುವುದು ವೇತನದಾರರ ಕರ್ತವ್ಯವಾಗಿರುತ್ತದೆ. ಅವರು ಅದನ್ನು ವೇತನ ಪಾವತಿಸುವ ಜಿಲ್ಲಾ ಖಜಾನಾಧಿಕಾರಿಗಳು/ಉಪ ಖಜಾನಾಧಿಕಾರಿಗಳು, ಇವರಿಗೆ ತಿಳಿಸತಕ್ಕದ್ದು.

20. ವೇತನದಾರರು ರಾಜ್ಯದಿಂದ ಹೊರಗೆ ವಲಸೆ ಹೋದಲ್ಲಿ ಆ ಕೂಡಲೇ ವೇತನ ಸಂದಾಯವನ್ನು ತಕ್ಷಣದಿಂದ ನಿಲ್ಲಿಸಬೇಕು.

21. ಲಭ್ಯವಿರುವ ನಿಧಿಗಳ ಆಧಾರದ ಮೇಲೆ ಸರ್ಕಾರವು ಯಾವುದೇ ವೇಳೆಯಲ್ಲಿ ಮೈತ್ರಿ ವೇತನವನ್ನು ರದ್ದುಗೊಳಿಸಬಹುದು ಅಥವಾ ತಡೆಹಿಡಿಯಬಹುದು ಅಥವಾ ನಿರ್ಭಂದಿಸಬಹುದು.

22. ಯಾವುದೇ ವ್ಯಕ್ತಿಯ ಯಾವುದೇ ಘೋಷಣೆಯ ಆಧಾರದ ಮೇಲೆ ಮೈತ್ರಿ ವೇತನ ಪಡೆದಿದ್ದು, ಅನಂತರ ಅಡ್ಡ ಸುಳ್ಳು ಎಂದು ಕಂಡುಬಂದಲ್ಲಿ ಅವರು ಪಡೆದ ವೇತನವನ್ನು ವಸೂಲು ಮಾಡುವ ಅಧಿಕಾರವನ್ನು ಸರ್ಕಾರವು ಕಾದಿರಿಸಿಕೊಂಡಿದೆ. ವೇತನದಾರರು ನೈತಿಕ ಪತನವನ್ನೊಳಗೊಂಡಂತಹ ಅಪರಾಧವನ್ನು ಎಸಗಿದಂತ ಸಂದರ್ಭದಲ್ಲಿ ಸಹ ವೇತನವನ್ನು ನಿಲ್ಲಿಸಬೇಕು.

(ಎ) ಯಾರೇ ಅರ್ಜಿದಾರರು ಮೈತ್ರಿ ವೇತನ ನೀಡಿಕೆಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಆದಾಯ ಮತ್ತು ಇತರೆ ವಿವರಗಳ ಬಗ್ಗೆ ಮೋಸ ಹಾಗೂ ಅಪ್ರಮಾಣಿಕ ಉದ್ದೇಶದಿಂದ ಮಂಜೂರು ಮಾಡುವ ನೌಕರರಿಗೆ ತಪ್ಪು ಮಾಹಿತಿ ನೀಡಿದಲ್ಲಿ ವೇತನವೇ ಮೋಸದ ಅಪರಾದವೆಂದು ಫಲಾನುಭವಿಯ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಹೂಡಬಹುದು.

(ಬಿ) ನಿಯಮಗಳಲ್ಲಿ ಸಂಬಂಧಿಸಿದಂತೆ ಯಾವುದೇ ಸೂಕ್ತ ವಿಚಾರಣೆ ನಡೆಸದೆ ಮೈತ್ರಿ ವೇತನಗಳ ಬಗ್ಗೆ ಶಿಫಾರಸ್ಸು ಮಾಡಿದಂತ ನೌಕರರ/ಅಧಿಕಾರಿಗಳ ವಿರುದ್ಧ ಸಹ ಆಡಳಿತ ಇಲಾಖೆಯು ಶಿಸ್ತಿನ ಕ್ರಮವನ್ನು ಕೈಗೊಳ್ಳಬೇಕು.

(ಎಸ್. ಕಾತ್ಯಾಯಿನಿ ದೇವಿ) 1/8/13
ಪೀಠಾಧಿಕಾರಿ
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು
ಕಂದಾಯ ಇಲಾಖೆ

ನಮೂನೆ- -I
(ನಿಯಮ 11)

ಮೈತ್ರಿ ಯೋಜನೆಯ ವೇತನಕ್ಕಾಗಿ ಅರ್ಜಿ

ಜಿಲ್ಲೆ .....

ತಾಲ್ಲೂಕು .....
ಗ್ರಾಮ .....
ಪಟ್ಟಣ .....

1.	ಅರ್ಜಿದಾರರ ಹೆಸರು	
2.	ತಂದೆಯ / ಗಂಡನ ಹೆಸರು	
3.	ಪೂರ್ಣ ಅಂಚೆ ವಿಳಾಸ ತಾತ್ಕಾಲಿಕ ವಿಳಾಸ ..... ಖಾಯಂ ವಿಳಾಸ	
4.	ವಯಸ್ಸು (ಅರ್ಜಿ ಸಲ್ಲಿಸಿದ ದಿನಾಂಕದಿಂದ ವಯಸ್ಸು) (ವಯಸ್ಸನ್ನು ದೃಢೀಕರಿಸಲು ದಸ್ತಾವೇಜುಗಳ ವಿವರಗಳನ್ನು ಲಗತ್ತಿಸಿದೆ/ ಲಗತ್ತಿಸಲಾಗಿಲ್ಲ. ಲಗತ್ತಿಸಿದ್ದರೆ ಅವು ಮೂಲ ದಾಖಲೆಗಳೆ ಅಥವಾ ಪ್ರತಿಗಳೆ)	
5.	ಗುರುತು ಚಿಹ್ನೆಗಳು :- 1. 2.	
6.	ಅರ್ಜಿದಾರರ ಸಂಬಂಧಿಕರು ಮತ್ತು ಅವರ ವಯಸ್ಸಿನ ವಿವರಗಳು :- (ಅ) (ಆ) (ಇ) (ಉ) (ಊ)	
7.	ಅರ್ಜಿದಾರರ ವಾರ್ಷಿಕ ಆದಾಯ	
8.	ಅರ್ಜಿದಾರರು ಜಮಾ ಮಾಡಿರುವ ಹಣದ ವಿವರಗಳು. (ಅ) ಖೊಬಲಗು (ಆ) ಯಾವ ವಿಧದಲ್ಲಿ (ಇ) ಎಲ್ಲಿ (ಸಂಸ್ಥೆ)	
9.	ವೃದ್ಧಾಪ್ಯ ವೇತನ/ವಿಧವಾ ವೇತನ/ಅಂಗವಿಕಲ ವೇತನ ಅಥವಾ ಬೇರೆ ಯಾವುದೇ ರೀತಿಯ ವೇತನವನ್ನು ಸಾರ್ವಜನಿಕ ಅಥವಾ ಖಾಸಗಿ ಮೂಲಗಳಿಂದ ಪಡೆಯುತ್ತಿದ್ದಾರೆಯೇ ಪಡೆಯುತ್ತಿದ್ದರೆ, ವಿವರಗಳನ್ನು ನೀಡುವುದು.	
10.	ಅರ್ಜಿದಾರರು ಹೊಂದಿರುವ ವೃತ್ತಿ	
11.	ಲಗತ್ತಿಸಲಾದ ದಾಖಲೆಗಳು i. ಅಂತ್ಯೋದಯ ಪಡಿತರ ಚೀಟಿ ಇಲ್ಲದಿದ್ದಲ್ಲಿ ಸ್ವಯಂಘೋಷಿತ ಆದಾಯ ಪ್ರಮಾಣ ಪತ್ರ	

		ii. ಚುನಾವಣಾ ಗುರುತಿನ ಚೀಟಿ ಅಥವಾ ವಿಳಾಸದ ಬಗ್ಗೆ ಧೃಡೀಕರಣ ದಾಖಲೆ/ವಯಸ್ಸಿನ ಬಗ್ಗೆ ವೈದ್ಯಕೀಯ ದೃಡೀಕರಣ ಪತ್ರ.	
		iii. ಲಿಂಗತ್ವ ಅಲ್ಪಸಂಖ್ಯಾತರೆಂದು ವೈದ್ಯಕೀಯ ದೃಡೀಕರಣ ಪತ್ರ ಅಥವಾ ಲಿಂಗತ್ವ ಅಲ್ಪ ಸಂಖ್ಯಾತರೆಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸುತ್ತೋಲೆ ಸಂಖ್ಯೆ:ಮಮಇ 11 ಮಅನಿ 2013, ದಿನಾಂಕ:29-07-2013ರಂತೆ ಸಮುದಾಯ ಆಧಾರಿತ ಸಂಸ್ಥೆಗಳಾದ "ಸಂಗಮ" ಮತ್ತು "ಕೆ.ಎಸ್.ಎಂ.ಎಫ್" ಸಂಸ್ಥೆಗಳ ನೋಂದಾಯಿತ ಸದಸ್ಯತ್ವವನ್ನು ಅಫಿಡೆವಿಟ್/ ಪ್ರಮಾಣ ಪತ್ರ.	

ನಾನು ಒದಗಿಸಿರುವ ಎಲ್ಲಾ ವಿವರಗಳು ನನ್ನ ತಿಳುವಳಿಕೆಯ ಮಟ್ಟಿಗೆ ಸಮರ್ಪಕವಾಗಿವೆ. ನಾನು ಒದಗಿಸಿರುವ ಮಾಹಿತಿಯು ಯಾವುದೇ ಕಾಲದಲ್ಲಿ ಸುಳ್ಳೆಂದು ಕಂಡುಬಂದರೆ, ನಾನು ಪಡೆದ ಮೈತ್ರಿ ಯೋಜನೆಯ ವೇತನವನ್ನು ಸರ್ಕಾರಕ್ಕೆ ನಾನು ಈ ಮೂಲಕ ಮರುಪಾವತಿ ಮಾಡುತ್ತೇನೆ.

ಸ್ಥಳ :.....

ದಿನಾಂಕ: .....

ಅರ್ಜಿದಾರರ ಸಹಿ

ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು

ನಮೂನೆ-ಮೈತ್ರಿ-Iಎ

(ನಿಯಮ 12)

ಸ್ವೀಕೃತಿ ನಮೂನೆ

..... ಜಿಲ್ಲೆಯ..... ತಾಲ್ಲೂಕಿನ ------ಹೋಬಳಿಯ ಉಪ ತಹಶೀಲ್ದಾರರ

ಕಚೇರಿಯಲ್ಲಿ ಮೈತ್ರಿ ವೇತನಕ್ಕಾಗಿ ಶ್ರೀಮತಿ/ಶ್ರೀಮತಿ ....

ಇವರಿಂದ.....ರಂದು ಅರ್ಜಿಯನ್ನು ಸ್ವೀಕರಿಸಲಾಗಿದೆ.

ಸ್ಥಳ : .....

ದಿನಾಂಕ: .....

ಸಹಿ :.....

ಹುದ್ದೆ : .....

ನಮೂನೆ–II
(ನಿಯಮ 13)

ಮೈತ್ರಿ ಯೋಜನೆ ವೇತನಗಳ ವೇತನದಾರರ ಅರ್ಜಿ ರಿಜಿಸ್ಟರ್

ತಾಲ್ಲೂಕು ..... ಜಿಲ್ಲೆ .....

ಕ್ರಮ ಸಂಖ್ಯೆ	ಅರ್ಜಿದಾರರ ಹೆಸರು ಮತ್ತು ಅವರ ತಂದೆಯ/ಪೋಷಕರ ಹೆಸರು	ಪೂರ್ಣ ವಿಳಾಸ	ಸಂಸ್ಥೆಯ ಹೆಸರು ಮತ್ತು ಪೂರ್ಣ ವಿಳಾಸ, ಯಾವುದಾದರು ಇದ್ದರೆ	ಇದು ನಿಯಮ 10 (ಎ) ಅಥವಾ (ಎ)ರ ಮೇರೆಗೆ ಬರುವ ಪ್ರಕರಣಗಳಾಗಿದ್ದಲ್ಲಿ ವಿವರಗಳು	ಅರ್ಜಿ ಸಲ್ಲಿಸಿದ ರಸೀದಿಯ ದಿನಾಂಕ	ಅರ್ಜಿಯನ್ನು ವಿಚಾರಣೆಗೆ ಕಳುಹಿಸಿದ ದಿನಾಂಕ	ವಿಚಾರಣಾಧಿಕಾರಿಯ ವರದಿಯ ದಿನಾಂಕ	ಮಂಜೂರಾತಿ ಪ್ರಾಧಿಕಾರಕ್ಕೆ ಅರ್ಜಿಯನ್ನು ಕಳುಹಿಸಿದ ದಿನಾಂಕ	ಶಿಫಾರಸ್ಸಿನ ಸಾರಾಂಶ	ಮಂಜೂರು ಪ್ರಾಧಿಕಾರದ ಆದೇಶ ಮತ್ತು ಉಲ್ಲೇಖಿತ ಸಂಖ್ಯೆ	ವೇತನ ಸಂದಾಯದ ಆದೇಶ ಸಂಖ್ಯೆ ಮತ್ತು ದಿನಾಂಕ	ಷರಾ
1	2	3	4	5	6	7	8	9	10	11	12	13

ನಮೂನೆ– III
(ನಿಯಮ 17)

ವಿಚಾರಣಾಧಿಕಾರಿಯ ವರದಿ

ನಿಯಮಗಳಲ್ಲಿ ಅಗತ್ಯಪಡಿಸಿರುವಂತೆ ನಾನು ಅವಶ್ಯಕ ವಿಚಾರಣೆಗಳನ್ನು ನಡೆಸಿ ಈ ಕೆಳಕಂಡ ವರದಿಯನ್ನು ಸಲ್ಲಿಸುತ್ತಿದ್ದೇನೆ:–

1.	ವಿಚಾರಣೆಯ ದಿನಾಂಕದಂದು ಅರ್ಜಿದಾರರ ವಯಸ್ಸು ಎಷ್ಟು?	
2.	ಅರ್ಜಿದಾರರ ಒಟ್ಟು ವಾರ್ಷಿಕ ಆದಾಯವೆಷ್ಟು? (i) ಕೂಲಿ ರೂ. ..... ತಿಂಗಳಿಗೆ (ii) ಕಟ್ಟಡದ ಬಾಡಿಗೆ ರೂ..... ವಾರ್ಷಿಕ (iii) ಜಮೀನಿನಿಂದ ಆದಾಯ ರೂ..... ವಾರ್ಷಿಕ (iv) ಠೇವಣಿಗಳ ಮೇಲೆ ಬಡ್ಡಿ ರೂ..... ವಾರ್ಷಿಕ (v) ಕುಟುಂಬ ನಿವೃತ್ತಿ ವೇತನ ರೂ..... ವಾರ್ಷಿಕ (vi) ಯಾವುದೇ ಇತರೆ ಮೂಲಗಳಿಂದ ರೂ..... ವಾರ್ಷಿಕ (vii) ಕುಟುಂಬದ ಒಟ್ಟು ವಾರ್ಷಿಕ ಆದಾಯ ರೂ.....	
3.	ಆತ/ಆಕೆ ಈ ಕೆಳಗಿನವುಗಳನ್ನು ಪಡೆಯುತ್ತಿದ್ದಾರೆಯೇ (i) ವೃದ್ಧಾಪ್ಯ ವೇತನ/ಸಂಧ್ಯಾ ಸುರಕ್ಷಾ ವೇತನ (ii) ವಿಧವಾ ವೇತನ (iii) ಅಂಗವಿಕಲರ ವೇತನ (iv) ದೇವದಾಸಿ ವೇತನ (v) ಪಿಪಿಎಫ್/ಎಲ್ಐ ಸಂಬಂಧಿಸಿದ ವೇತನ (vi) ಕುಟುಂಬ ವೇತನ (vii) ಹೊಂದಿರುವ ಜಮೀನು: ವಿಸ್ತೀರ್ಣ..... ಆದಾಯ ರೂ. ..... (viii) ಮನೆ ಬಾಡಿಗೆ ರೂ.	
4.	ಆತ/ಆಕೆ ಕಳೆದ 10 ವರ್ಷಗಳಿಂದ ಕರ್ನಾಟಕದಲ್ಲಿ ವಾಸಿಸುತ್ತಿದ್ದಾರೆಯೇ : ಆತ/ಆಕೆ ವಾಸಸ್ಥಳದ ಪ್ರಮಾಣ ಪತ್ರವನ್ನು ಲಗತ್ತಿಸಿದ್ದಾರೆಯೇ ?	

5.	ಅರ್ಜಿದಾರರು ಸಲ್ಲಿಸಿದ ಈ ಅರ್ಜಿ ಮೊದಲನೆಯ/ಎರಡನೆಯ/ಮೂರನೆಯ ಅರ್ಜಿಯೇ? ಹಿಂದಿನ ಅರ್ಜಿ ಬಗ್ಗೆ ಹೊರಡಿಸಿದ ಆದೇಶಗಳು ಈಗಿವೆ :-	
6.	ಆಕೆಯ ಪ್ರಸ್ತುತ ವೃತ್ತಿ ಏನು? ವೃತ್ತಿಯ ಬಗ್ಗೆ ದಾಖಲೆ ಲಗತ್ತಿಸುವುದು.	
7.	ಆಕೆ ನೀಡಿರುವ ವಿಳಾಸದಲ್ಲಿ ವಾಸಿಸುತ್ತಿದ್ದಾರೆಯೇ? ಅದು ಸರಿಯಾಗಿದೆಯೇ? ಪಿನ್‌ಕೋಡ್ ಸಹಿತ ಪೂರ್ತಿ ಅಂಚೆ ವಿಳಾಸವನ್ನು ನೀಡುವುದು.	
8.	ಆಕೆ ನಾಲ್ಕು ಪಾಸ್‌ಪೋರ್ಟ್ ಸೈಜಿನ ಭಾವಚಿತ್ರಗಳನ್ನು ಲಗತ್ತಿಸಿದ್ದಾರೆಯೇ?	
9.	ಸ್ಥಳೀಯ ವಿಚಾರಣೆ ಬಗ್ಗೆ ಮಹಾಜರನ್ನು ಲಗತ್ತಿಸಿದ್ದಾರೆಯೇ?	
10.	ಅರ್ಜಿದಾರರನ್ನು ಮೈತ್ರಿ ವೇತನಕ್ಕೆ ನೀವು ಶಿಫಾರಸ್ಸು ಮಾಡುತ್ತಿರುವಿರಾ? ಹೌದು/ಇಲ್ಲ	

ಸ್ಥಳ :.....

ದಿನಾಂಕ: .....

ವಿಚಾರಣಾಧಿಕಾರಿಯ ಸಹಿ ಮತ್ತು ಹುದ್ದೆ

ವಿಚಾರಣಾಧಿಕಾರಿಯವರು ಮೇಲೆ ಒದಗಿಸಿರುವ ಮಾಹಿತಿಯನ್ನು ಪರಿಶೀಲಿಸಿ ನನ್ನ ತಿಳುವಳಿಕೆ ಮಟ್ಟಿಗೆ ಸಮರ್ಪಕವಾಗಿದೆ ಎಂದು ಪ್ರಮಾಣೀಕರಿಸುತ್ತೇನೆ.

ಸ್ಥಳ :.....

ದಿನಾಂಕ:.....

ಉಪತಹಶೀಲ್ದಾರರ ಸಹಿ

ನಮೂನೆ– IV
(ನಿಯಮ 17)

ಉಪತಹಶೀಲ್ದಾರರ ಕಚೇರಿ
..... ಹೋಬಳಿ
ತಾಲ್ಲೂಕು
..... ಜಿಲ್ಲೆ

ವಿಷಯ:– ..... ಅವರಿಗೆ ಮೈತ್ರಿ ಯೋಜನೆ ವೇತನ ಮಂಜೂರಾತಿಯ

ಆದೇಶ ಸಂಖ್ಯೆ: .....
ದಿನಾಂಕ :.....

ಮೇಲೆ ತಿಳಿಸಲಾಗಿರುವ ವಿಷಯ ಕುರಿತು ..... ಹೋಬಳಿಯ ತಾಲ್ಲೂಕಿನ ವಿಚಾರಣಾಧಿಕಾರಿ ಅವರ ಪತ್ರ ಸಂಖ್ಯೆ: .....ದಿನಾಂಕ: ..... ಗೆ ಸಂಬಂಧಿಸಿದಂತೆ, ಈ ಕೆಳಗೆ ತಿಳಿಸಲಾಗಿರುವ ವ್ಯಕ್ತಿಗೆ ಈ ಆದೇಶದ ದಿನಾಂಕದಿಂದ ಜಾರಿಗೆ ಬರುವಂತೆ ವ್ಯಕ್ತಿಯ ಆದಾಯ ನಿಗದಿತ ಮಟ್ಟಕ್ಕಿಂತ ಹೆಚ್ಚಾಗುವವರೆಗೂ/ಮೃತಳಾಗುವವರೆಗೆ ಪ್ರತಿ ತಿಂಗಳಿಗೆ ರೂ. ..... (.....ರೂಪಾಯಿಗಳು ಮಾತ್ರ) ಮೈತ್ರಿ ವೇತನದ ಸಂದಾಯಕ್ಕೆ ಮಂಜೂರಾತಿ ನೀಡಲಾಗಿದೆ.

ವಿಳಾಸ : – ಶ್ರೀಮತಿ .....
.....
.....
.....

ವೇತನದ ಸಂದಾಯವನ್ನು ಜಿಲ್ಲಾ/ಉಪ ಖಜಾನೆ ಅಧಿಕಾರಿ ..... ಅವರು ಫಲಾನುಭವಿಯ ಬ್ಯಾಂಕ್ ಖಾತೆ/ಅಂಚೆಕಚೇರಿಯ ಉಳಿತಾಯ ಖಾತೆಗೆ ಜಮಾ ಮಾಡತಕ್ಕದ್ದು.

ವೇತನದಾತನು/ಸ್ವೀಕರ್ತರು ಯಾವುದೇ ಕಾಲದಲ್ಲಿ ವಿಳಾಸದಲ್ಲಿ ಆದ ಯಾವುದೇ ಬದಲಾವಣೆಯನ್ನು ವಿಳಂಬ ಮಾಡದೆ ..... ತಹಶೀಲ್ದಾರರಿಗೆ ತಿಳಿಸತಕ್ಕದು. ವಿಳಂಬ ಮಾಡುವುದರಿಂದಾಗಿ ವೇತನದ ಸಂದಾಯವನ್ನು ಮುಂದೂಡಲಾಗುತ್ತದೆ.

ವೇತನವು ತಪ್ಪು ತಿಳುವಳಿಕೆಯ ಅಥವಾ ಸುಳ್ಳು ಮಾಹಿತಿಯ ಆಧಾರದ ಮೇಲೆ ಮಂಜೂರಾಗಿದೆಯೆಂದು ಕಂಡುಬಂದರೆ, ಈ ಆದೇಶವು ರದ್ದಿಯಾತಿಗೆ ಬದ್ಧವಾಗುತ್ತದೆ.

ಉಪ ತಹಶೀಲ್ದಾರರು
------ಹೋಬಳಿ
..... ತಾಲ್ಲೂಕು
..... ಜಿಲ್ಲೆ

ಇವರಿಗೆ,
ಜಿಲ್ಲಾ ಖಜಾನೆ ಅಧಿಕಾರಿ/ ಉಪ ಖಜಾನೆ ಅಧಿಕಾರಿ.....
ಪ್ರತಿಯನ್ನು :–
ತಾಲ್ಲೂಕಿನ ತಹಶೀಲ್ದಾರರು_____.
ಜಿಲ್ಲಾಧಿಕಾರಿಗಳು .....
ವೇತನದಾರರು/ಸ್ವೀಕರ್ತರು .....
ಕಂದಾಯ ನಿರೀಕ್ಷಕರು_____
ಗ್ರಾಮ ಲೆಕ್ಕಾಧಿಕಾರಿ .....

ನಮೂನೆ-V
(ನಿಯಮ 17 ಮತ್ತು 21)

ಮೈತ್ರಿ ವೇತನದ ವೇತನ ಸಂದಾಯ ಆದೇಶಗಳ ವಹಿ

ಹೋಬಳಿ_____.
ತಾಲ್ಲೂಕು.....
ಜಿಲ್ಲೆ.....

ಕ್ರಮ ಸಂಖ್ಯೆ	ವೇತನದಾರರ ಹೆಸರು ಮತ್ತು ಪೂರ್ಣ ವಿಳಾಸ	ಹೆಸರು ಮತ್ತು ಸಂಸ್ಥೆಯ ಪೂರ್ಣ ವಿಳಾಸ, ಯೂವುದಾದರು ಇದ್ದರೆ, ಅವನು/ಅವಳು ವಾಸಿಸುತ್ತಿರುವ ವಿಳಾಸ	ವೇತನ ಸಂದಾಯ ಆದೇಶ ಸಂಖ್ಯೆ ಮತ್ತು ದಿನಾಂಕ	ಜಾರಿಗೆ ಬರುವ ತಿಂಗಳು ಮತ್ತು ವರ್ಷ		ವೇತನದ ಮೊಬಲಗು	ವೇತನ ಕೊನೆಗೊಳ್ಳುವ ದಿನಾಂಕ	ದಿನಾಂಕ, ಪ್ರಭಾರಿ ಅಧಿಕಾರಿಯ ಚಿಕ್ಕ ರುಜು	ಷರಾ
				ತಿಂಗಳು	ವರ್ಷ				
1	2	2(ಎ)	3	4(ಎ)	4(ಬಿ)	5	6	7	8

* ರೆಡ್ ಇಂಕ್‌ನಲ್ಲಿ ಭರ್ತಿ ಮಾಡಬೇಕು
ವೇತನದಾರಳು ಯಾವುದದಾರು ಸಂಸ್ಥೆಯ ನಿವಾಸಿಯಾಗಿದ್ದರೆ ಸಂಸ್ಥೆಯ ಹೆಸರನ್ನು ನಮೂದಿಸತಕ್ಕದ್ದು.

ನಮೂನೆ- VI
(ನಿಯಮ 21)

ವೇತನ ಪಡೆಯುವ ವೇತನದಾರರ ಮರಣದ/ವಿಳಾಸದ/ಬದಲಾವಣೆ/ಪುನರ್ವಿವಾಹ/ಉದ್ಯೋಗ ಇತ್ಯಾದಿಗಳ ಸೂಚನೆಯ ನಮೂನೆ.

ಜಿಲ್ಲೆ.....
ತಾಲ್ಲೂಕು.....
ಗ್ರಾಮ/ಪಟ್ಟಣ.....

..... ಮೈತ್ರಿ ಯೋಜನೆ ವೇತನ ಸಂಖ್ಯೆ:
.....ದಿನಾಂಕ:..... ಅವರು 200.....ರ.....
ದಿನದಂದು ಮೃತರಾದರು.

..... ಮೈತ್ರಿ ಯೋಜನೆ ವೇತನ ಸಂಖ್ಯೆ:..... ದಿನಾಂಕ.....
ಅವರು ತಮ್ಮ ವಿಳಾಸವನ್ನು ಈ ಕೆಳಕಂಡಂತೆ ಬದಲಾಯಿಸಿದ್ದಾರೆ. ....

.....

.....

..... ವೇತನ ಸಂಖ್ಯೆ:.....ದಿನಾಂಕ: ..... ಅವರು
ಗ್ರಾಮವನ್ನು ಬಿಟ್ಟುಹೋಗಿದ್ದಾರೆ. ಆಕೆ/ಆತ ಗ್ರಾಮವನ್ನು ಬಿಟ್ಟ ತರುವಾಯದ ವಿಳಾಸ ತಿಳಿದುಬಂದಿಲ್ಲ.

_____ರವರ ಮೈತ್ರಿ ವೇತನವನ್ನು ..... (ತಿಂಗಳು).....
ವರ್ಷದಿಂದ ಕೊನೆಗೊಳಿಸುವುದು.

ಸ್ಥಳ: .....
ದಿನಾಂಕ:.....

ಮೊಹರು : *ಗ್ರಾಮಲೆಕ್ಕಾಧಿಕಾರಿಯ ಸಹಿ*

(* ಅನ್ವಯಿಸದೇ ಇರುವುದನ್ನು ಹೊಡೆದುಹಾಕುವುದು)

ನಮೂನೆ–VII

ಮೈತ್ರಿ ಯೋಜನೆಯ ವೇತನ ಸಂದಾಯ ತನಿಖಾ ರಿಜಿಸ್ಟರು

1. ಕ್ರಮ ಸಂಖ್ಯೆ	
2. ವೇತನ ಮಂಜೂರಾದ ಆದೇಶ ಸಂಖ್ಯೆ ಮತ್ತು ದಿನಾಂಕ	
3. ವೇತನದಾರರ ಹೆಸರು	
4. ಪೂರ್ಣ ವಿಳಾಸ	
5. ಪಾಲಕರು/ಸಂಸ್ಥೆ ಯಾವುದಾರರು ಇದ್ದಲ್ಲಿ, ಅವರ/ಅದರ ಹೆಸರು ಮತ್ತು ಪೂರ್ಣ ವಿಳಾಸ	
6. ವೇತನದ ಮೊಬಲಗು (ಅಂಕ ಮತ್ತು ಪದಗಳಲ್ಲಿ)	
7. ವೇತನ ಪ್ರಾರಂಭವಾದ ದಿನಾಂಕ	
8. ವಿಳಾಸದಲ್ಲಿನ ಬದಲಾವಣೆ ಯಾವುದಾದರೂ ಇದ್ದರೆ	
9. ವೇತನ ಕೊನೆಗೊಂಡ ದಿನಾಂಕ	
10. ಇತರೆ ಷರಾ	

ಸ್ಥಳ :
ದಿನಾಂಕ:

ಖಜಾನೆ ಅಧಿಕಾರಿಯ ಸಹಿ

ವೇತನದಾರರ ಮಾದರಿ ರುಜುವಿನ ಚೀಟಿ ಅಂಟಿಸುವ ಸ್ಥಳ

ಮೈತ್ರಿ ಯೋಜನೆ ವೇತನದಾರರ ಅಸ್ತಿತ್ವ ಮತ್ತು ಸ್ಥಿತಿಗತಿಗೆ ಸಂಬಂಧಿಸಿದಂತೆ ತಹಶೀಲ್ದಾರರಿಂದ ಪಡೆದ ವರದಿಗಳ ಬಗ್ಗೆ ಟಿಪ್ಪಣಿಗಳನ್ನು ಬರೆಯುವ ಸ್ಥಳ.

ನಮೂನೆ–VIII

(ನಿಯಮ–36)

ಕರ್ನಾಟಕ ಸರ್ಕಾರ

ಮೈತ್ರಿ ಯೋಜನೆಯ ಗುರುತು ಪತ್ರ

1. ವೇತನದಾರರ ಹೆಸರು ಮತ್ತು ವಿಳಾಸ :
2. ವೇತನ ಮಂಜೂರಾತಿ ಆದೇಶ ಸಂಖ್ಯೆ ಮತ್ತು ದಿನಾಂಕ :
3. ವೇತನದ ಮೊಬಲಗು : ರೂ.....(ಪದಗಳಲ್ಲಿ)

ವೇತನದಾರರ ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ ಅಂಟಿಸಲು ಸ್ಥಳ

ಗುರುತು ಚಿಹ್ನೆಗಳು :

(1)

(2)

ವೇತನದಾರರ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು

ಉಪ ತಹಶೀಲ್ದಾರರ ಸಹಿ

ಕರ್ನಾಟಕ ಸರ್ಕಾರ

ಮಮಇ 11 ಮಅನಿ 2013

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 29.07.2013

ಸುತ್ತೋಲೆ

ವಿಷಯ: ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರವು ರೂಪಿಸಿರುವ ಯೋಜನಾ ಕಾರ್ಯಕ್ರಮಗಳ ಅನುಷ್ಠಾನದ –. ಕುರಿತು.

ಉಲ್ಲೇಖ: 1) ಸರ್ಕಾರಿ ಆದೇಶ ಸಂಖ್ಯೆ:ಮಮಇ 68 ಮಅನಿ 10 ದಿನಾಂಕ:20.10.2010

2) ವ್ಯವಸ್ಥಾಪಕ ನಿರ್ದೇಶಕರು, ಕ.ರಾ.ಮ.ಅ.ನಿ ಇವರ ಪತ್ರ ಸಂಖ್ಯೆ: ಮಅನಿ/ಲಿಂಅಸಂ–01 2010–11 ದಿನಾಂಕ:10.08.2012

3) ಸರ್ಕಾರದ ಅರೆ ಸರ್ಕಾರಿ ಪತ್ರಸಂಖ್ಯೆ: ಮಮಇ 11 ರಾಮಅ 13 ದಿನಾಂಕ:08.02.2013

ರಾಜ್ಯದಲ್ಲಿರುವ ಲಿಂಗತ್ವ ಅಲ್ಪಸಂಖ್ಯಾತರನ್ನು ಸಮಾಜದ ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಸರ್ಕಾರವು ಅವರುಗಳಿಗಾಗಿ ಮೂಲಭೂತ ಸೌಕರ್ಯಗಳಾದ ವಸತಿ, ಬಿ.ಪಿ.ಎಲ್.ಕಾರ್ಡ್, 2 ಎ–ಗುಂಪಿಗೆ ಸೇರಿಸುವುದು, ಚುನಾವಣೆಯಲ್ಲಿ ಮತ ಚಲಾಯಿಸುವ ಹಕ್ಕು, ಆರೋಗ್ಯ, ಉನ್ನತ ಶಿಕ್ಷಣ, ಪಿಂಚಣಿ, ವೃತ್ತಿ ತರಬೇತಿ ಸೌಲಭ್ಯಗಳನ್ನು ಒದಗಿಸಲು ಮೇಲೆ ಓದಲಾದ ಉಲ್ಲೇಖ 1) ರ ಸರ್ಕಾರಿ ಆದೇಶದಲ್ಲಿ ಯೋಜನೆಯ ಮಾರ್ಗಸೂಚಿ ಆದೇಶವನ್ನು ಹೊರಡಿಸಲಾಗಿದ್ದು, ಈ ಯೋಜನೆಗಳ ಅನುಷ್ಠಾನದ ಉಸ್ತುವಾರಿಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಯನ್ನು ನೋಡಲ್ ಇಲಾಖೆಯೆಂದು ಹಾಗೂ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು ಉಸ್ತುವಾರಿ ಸಂಸ್ಥೆಯೆಂದು ನಿಯುಕ್ತಿಗೊಳಿಸಲಾಗಿರುತ್ತದೆ.

ಲಿಂಗತ್ವ ಅಲ್ಪಸಂಖ್ಯಾತರುಗಳ (ಹಿಜ್ರಾಗಳು, ಕೋಥಿಗಳು, ಜೋಗಪ್ಪಂದಿರು /ಎಫ್ ಟು ಎಂ / /ಎಂ ಟು ಎಫ್/ ಮಂಗಳಮುಖಿಯರು) ಕಲ್ಯಾಣಕ್ಕಾಗಿ ಉದ್ದೇಶಿಸಿರುವ ಯೋಜನೆಗಳ ಸೌಲಭ್ಯವನ್ನು ಫಲಾನುಭವಿಗಳಿಗೆ ತಲುಪಿಸಲು ಸರ್ಕಾರದ ಎಲ್ಲಾ ಇಲಾಖಾ ಮುಖ್ಯಸ್ಥರುಗಳಿಗೆ ಹಾಗೂ ಜಿಲ್ಲೆಯ ಮುಖ್ಯಸ್ಥರುಗಳಿಗೆ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ವತಿಯಿಂದ ಉಲ್ಲೇಖ 2) ರಲ್ಲಿ ಅರೆ ಸರ್ಕಾರಿ ಪತ್ರ ಹೊರಡಿಸಲಾಗಿದೆ.

ಲಿಂಗತ್ವ ಅಲ್ಪಸಂಖ್ಯಾತರಗಳನ್ನು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯಿಂದ ಲಿಂಗತ್ವ ದೃಢೀಕರಣ ಪ್ರಮಾಣ ಪತ್ರವನ್ನು ಇವರುಗಳು ಎದುರಿಸಬಹುದಾದ ತೊಂದರೆಗಳನ್ನು ನಿವಾರಿಸಲು "ಲಿಂಗತ್ವ ಅಲ್ಪಸಂಖ್ಯಾತರುಗಳು "ನಿರ್ವಾಣ್" ಆಗಿದ್ದಲ್ಲಿ ಮಾತ್ರ ಲಿಂಗತ್ವವನ್ನು ಗುರುತಿಸಲು ಸಾಧ್ಯವೆಂದು ಹಾಗೂ ವೈದ್ಯರು ಸಹ ಪ್ರಮಾಣ ಪತ್ರ ನೀಡಲು ಸಹಕಾರಿಯಾಗುತ್ತದೆ. ಆದರೆ, "ನಿರ್ವಾಣ್" ಆಗದವರಿಗೆ ವೈದ್ಯಕೀಯ ಪ್ರಮಾಣ ಪತ್ರ ನೀಡಲು ಸಾಧ್ಯಾವಾಗುತ್ತಿಲ್ಲವೆಂಬುದನ್ನು ಸರ್ಕಾರವು ಮನಗಂಡು, ಲಿಂಗತ್ವ ಅಲ್ಪಸಂಖ್ಯಾತರೆಲ್ಲರಿಗೂ ಸಮಾನ ದೃಷ್ಟಿಯಿಂದ ಸರ್ಕಾರದ ಸವಲತ್ತು ದಕ್ಕಿಸುವಂತಾಗಲು ಸಮುದಾಯ ಆಧಾರಿತ ಸಂಸ್ಥೆಗಳಾದ "ಸಂಗಮ" ಮತ್ತು "ಕೆ.ಎಸ್.ಎಂ.ಎಫ್" ಸಂಸ್ಥೆಗಳು ನೋಂದಾಯಿತ ಸದಸ್ಯತ್ವವನು ಅಫಿಡೆವಿಟ್ ಮೂಲಕ ಪ್ರಮಾಣೀಕರಿಸಿ ಗುರುತಿಸಿಕೊಳ್ಳತಕ್ಕದ್ದು.

ಅಫಿಡೆವಿಟ್‌ನ ಪ್ರಮಾಣ ಪತ್ರದ ಆಧಾರದ ಮೇಲೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ವೈದ್ಯಕೀಯ ಶಿಕ್ಷಣ ಇಲಾಖೆಯು ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಲಿಂಗತ್ವ ಅಲ್ಪಸಂಖ್ಯಾತರುಗಳಿಗೆ ಪ್ರತ್ಯೇಕವಾದ ವೈದ್ಯಕೀಯ ಸೌಲಭ್ಯ ಹಾಗೂ ಚಿಕಿತ್ಸೆಗಾಗಿ 2 ಪ್ರತ್ಯೇಕ ಹಾಸಿಗೆಗಳ ಕೊಠಡಿಯನ್ನು ಕಾಯ್ದಿರಿಸತಕ್ಕದ್ದು.

(ರಮೇಶ್.ಬಿ.ಝಳಕಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ
ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆ

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಗೆಜೆಟ್‌ನಲ್ಲಿ ಪ್ರಕಟಿಸಲು ಮತ್ತು 500 ಪ್ರತಿಗಳನ್ನು ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಇಲಾಖೆಗೆ ಒದಗಿಸಲು ಕೋರಿದೆ.

ಗೆ,

1) ಸರ್ಕಾರದ ಎಲ್ಲಾ ಇಲಾಖೆಗಳ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ವಿಕಾಸಸೌಧ/ ವಿಧಾನಸೌಧ/ ಬಹುಮಹಡಿಗಳ ಕಟ್ಟಡ, ಬೆಂಗಳೂರು.
2) ಎಲ್ಲಾ ಇಲಾಖೆಗಳ ಮುಖ್ಯಸ್ಥರು/ಆಯುಕ್ತರು/ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರುಗಳು.
3) ಎಲ್ಲಾ ಜಿಲ್ಲಾಧಿಕಾರಿಗಳು/ಪ್ರಾದೇಶಿಕ ಆಯುಕ್ತರು/ಮು.ಕಾನಿ.ಅ, ಜಿಲ್ಲಾ ಪಂಚಾಯಿತಿಗಳು.
4) ಎಲ್ಲಾ ತಾಲ್ಲೂಕು ಪಂಚಾಯತಿಗಳು/ ಜಿಲ್ಲಾ ಪಂಚಾಯತಿಗಳು/ ಎಲ್ಲಾ ಜಿಲ್ಲೆಯ ಖಜಾನಾಧಿಕಾರಿಗಳು.
5) ಕರ್ನಾಟಕ ರಾಜ್ಯದ ಎಲ್ಲಾ ಸರ್ಕಾರಿ ಆಸ್ಪತ್ರಗಳು.
6) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

ಕರ್ನಾಟಕ ಸರ್ಕಾರದ ನಡಾವಳಿಗಳು

ತಿದ್ದೋಲೆ

ಸಂಖ್ಯೆ: ಆರ್‌ಡಿ 95 ಡಿಎಸ್‌ಪಿ 2013 ದಿನಾಂಕ: 17-08-2013

ಸಾಮಾಜಿಕವಾಗಿ ಹಾಗೂ ಆರ್ಥಿಕವಾಗಿ ಸಂಕಷ್ಟದಲ್ಲಿರುವ 40 ರಿಂದ 64 ವರ್ಷದೊಳಗಿನ ಲಿಂಗತ್ವ ಅಲ್ಪಸಂಖ್ಯಾತರಿಗೆ ರೂ.500ಗಳ ಮಾಸಾಶನವನ್ನು ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 95 ಡಿಎಸ್‌ಪಿ 2013, ದಿನಾಂಕ: 01-08-2013 ರಂತೆ ಮೈತ್ರಿ ಯೋಜನೆ ಜಾರಿಗೆ ತಂದಿದ್ದು, ಆದೇಶದ ನಿಯಾಮಾವಳಿಗಳಂತೆ, ನಿಯಮ 10(i)(1)ರಂತೆ, ಅರ್ಜಿದಾರರು ಯೋಜನೆಯಡಿ ಸವಲತ್ತಿಗೆ ಅರ್ಜಿಗಳನ್ನು ಸಲ್ಲಿಸುವಾಗ, ಅಂತ್ಯೋದಯ ಪಡಿತರ ಚೀಟಿ ಇಲ್ಲದಿದ್ದಲ್ಲಿ ಸ್ವಯಂಘೋಷಿತ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು ಎಂಬ ನಿಯಮವನ್ನು ಬಿಪಿಎಲ್ ಪಡಿತರ ಚೀಟಿ ಇಲ್ಲದಿದ್ದಲ್ಲಿ ಸ್ವಯಂಘೋಷಿತ ಆದಾಯ ಪ್ರಮಾಣ ಪತ್ರವನ್ನು ಸಲ್ಲಿಸಬೇಕು ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ

17/8/13

(ಎಸ್. ಕಾತ್ಯಾಯಿನಿ ದೇವಿ)
ಪೀಠಾಧಿಕಾರಿ
ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳು
ಕಂದಾಯ ಇಲಾಖೆ

ಇವರಿಗೆ: ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು, ಇವರಿಗೆ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟಿಸಿ 500 ಪ್ರತಿಗಳನ್ನು ಸಾಮಾಜಿಕ ಭದ್ರತೆ ಮತ್ತು ಪಿಂಚಣಿಗಳ ನಿರ್ದೇಶನಾಲಯಕ್ಕೆ ಕಳುಹಿಸಬೇಕೆಂದು ಕೋರಿದೆ.

ಪ್ರತಿಯನ್ನು:

1. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕ ತಪಾಸಣೆ)(ಎ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳವರ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯ ಮಂತ್ರಿಗಳವರ ಪ್ರಧಾನ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
4. ಸರ್ಕಾರದ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
5. ವಿಭಾಗೀಯ ವ್ಯವಸ್ಥಾಪಕರು, ಭಾರತೀಯ ಜೀವ ವಿಮಾ ನಿಗಮ, ಪಿ&ಜಿಎಸ್ ಯುನಿಟ್, 4ನೇ ಮಹಡಿ, ಜೆ.ಸಿ. ರೋಡ್, ಬೆಂಗಳೂರು-02.
6. ಪ್ರಾದೇಶಿಕ ಆಯುಕ್ತರು, ಬೆಂಗಳೂರು/ಬೆಳಗಾವಿ/ಮೈಸೂರು/ಗುಲ್ಬರ್ಗಾ.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಸರ್ಕಾರದ ಅಧೀನ ಕಾರ್ಯದರ್ಶಿಗಳು, ಕಾರ್ಮಿಕ ಇಲಾಖೆ, ಬೆಂಗಳೂರು.
9. ನಿರ್ದೇಶಕರು, ಖಜಾನೆ ಇಲಾಖೆ, ಬೆಂಗಳೂರು.
10. ಸಂಬಂಧಪಟ್ಟ ಉಪ ವಿಭಾಗಧಿಕಾರಿಗಳು/ತಹಸೀಲ್ದಾರರುಗಳಿಗೆ.
11. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.

ಹೆಚ್ಚುವರಿ ಪ್ರತಿ ಮತ್ತು ರಕ್ಷಾ ಕಡತ.